★★★

ಎರಡು ದಿನಗಳ ನಂತರ ಬೆಳಿಗ್ಗಿನ ಉಪಾಹಾರದ ವೇಳೆ ನಾನು ಮತ್ತೆ ವಿಷಯ ಪ್ರಸ್ತಾಪಿಸಿದೆ. ರುದ್ರಮುನಿಯ ಪ್ರಕರಣ ನನ್ನ ತಲೆ ಕೊರೆಯುತ್ತಿತ್ತು.

"ರುದ್ರಮುನಿಯ ಪ್ರಕರಣದಲ್ಲಿ ಏನಾದ್ರೂ ಸಾಕ್ಷ್ಯ ದೊರಕಿತೆ? ಚಿನ್ನಪ್ಪನನ್ನು ಬಂಧಿಸುವಂತಹದು..."

ಬಿಸಿಯಾದ ಇಡ್ಲಿಯನ್ನು ಬಾಯಿಗಿರಿಸುತ್ತಾ ಕರಮಚಂದ ಪದ ಜೋಡಿಸಿದ,

"ಓಹ್! ಇಡೀ ಪ್ರಕರಣದಲ್ಲಿ ಒಂದು ಕೊನೆಯ ಕೊಂಡಿ ಉಳಿದುಕೊಂಡು ಬಿಟ್ಟಿದೆ. ಅದ್ರ ಮಾಹಿತಿಗಾಗಿ ಕಾಯ್ತಿದ್ದೇನೆ. ಯಾವುದೇ ಕ್ಷಣದಲ್ಲೂ ಅದು ಸ್ಪಷ್ಟವಾಗಬಹುದು..."

ಅವನ ಮಾತನ್ನು ತುಂಡರಿಸುವಂತೆ, ಚರವಾಣಿ ರಿಂಗಣಿಸಿತು. ಪರದೆಯ ಮೇಲೆ ಕಣ್ಣಾಡಿಸಿದ ಕರಮಚಂದ ನಕ್ಕು ಹೇಳಿದ,

"ವೆಲಂಟೈನ್ ಡಿಸೋಜ ಕರೆ ಮಾಡ್ತಿದ್ದಾನೆ... ಅಂದ್ರೆ ಪ್ರಕರಣ ಮುಗಿದ ಹಾಗೆ..."

ಕರಮಚಂದ ಡಿಸೋಜನೊಂದಿಗೆ ಸಂಭಾಷಿಸಿದ. ನನಗೆ ಅವನ ಮಾತುಗಳು ಒಗಟಿನಂತೆ ಕಂಡವು. ಅಧಿಕಾರಿಯೊಂದಿಗೆ ಮಾತು ಮುಗಿಸಿದ ಕರಮಚಂದ ಮತ್ತೆ ವಿವರಣೆ ನೀಡಿದ, "ಸಂಗಾತಿಯ ಪ್ರಕರಣಕ್ಕೆ ಈಗ ಮಂಗಳ ಹಾಡಬಹುದು... ನಾವೀಗ ಸಿದ್ಧರಾಗೋಣ. ಡಿಸೋಜ ಬರ್ತಿದಾನೆ..."

ನಾವು ಲಗುಬಗೆಯಿಂದ ಹೊರಡಲು ಅಣಿಯಾದೆವು. ಕೆಲಕ್ಷಣಗಳಲ್ಲಿ ಜೀಪಿನ ಸದ್ದು ಕೇಳಿತು.

"ಕುಟ್ಟಯ್ಯನಿಗೆ ರುದ್ರಮುನಿ ಬ್ಲಾಕ್‌ಮೇಲ್ ಮಾಡ್ತಿದ್ದು ಖಚಿತವಾಗಿ ಗೊತ್ತಾಗಿದ್ದು ಹೇಗೆ ಗೊತ್ತೆ? ರುದ್ರಮುನಿ ತನ್ನ ಮೊಬೈಲಿಂದ ಒಮ್ಮೆ ಹಣ ನೀಡಲು ಕರೆಮಾಡಿದ್ದ. ಆದ್ರೆ ಆ ಮೊಬೈಲು ಇದ್ದಿದ್ದು ಚಿನ್ನಪ್ಪನ ಬಳಿ! ಕರೆ ಮಾಡಿದ್ದು ಚಿನ್ನಪ್ಪನೇ!! ಏನೋ ಸಬೂಬು ನೀಡಿ ಚಿನ್ನಪ್ಪ ರುದ್ರಮುನಿಯ ಹೆಸರಲ್ಲಿ ಸಿಮ್ ಖರೀದಿಸಿ, ಅದನ್ನು ತನ್ನ ಬಳಿ ಇರಿಸಿಕೊಂಡಿದ್ದ. ಅದರ ಉದ್ದೇಶ ಏನು ಗೊತ್ತೆ? ಕುಟ್ಟಯ್ಯನಿಗೆ ರುದ್ರಮುನಿಯ ಮೇಲೆ ಅನುಮಾನ ಬರಲಿ ಅಂತ!! ಆ ಫೋನಿನಿಂದ ರುದ್ರಮುನಿಗೂ ಕರೆ ಹೋಗಿತ್ತು ಅದೇ ದಿನ! ನಾನು ಆ ಸಂಖ್ಯೆಯ ಜಾಡು ಹಿಡಿದಾಗ ಅದು ರುದ್ರಮುನಿಯ ಹೆಸರಲ್ಲಿರೋದು ತಿಳಿಯಿತು... ಆ ಫೋನು ಚಿನ್ನಪ್ಪನ ಮನೆಯಲ್ಲಿ ಇರೋದು ಪತ್ತೆಯಾಗಿದೆ..."

ಜೀಪಿನಲ್ಲಿ ಪಯಣಿಸುತ್ತಾ ಕರಮಚಂದ ವಿವರ ಒದಗಿಸಿದ.

"ಹಾಗಿದ್ರೆ ಚಿನ್ನಪ್ಪ ರುದ್ರಮುನಿಯನ್ನ ಮುಗಿಸಿ ಬಿಟ್ಟನಾ?..."

"ಇಲ್ಲಾ... ಅವ್ನೀಗ ಗುಜರಾತಿನಲ್ಲಿದ್ದಾನೆ! ಈಗಷ್ಟೇ ಡಿಸೋಜ ಅದನ್ನ ಖಚಿತಪಡಿಸ್ದ. ಅದಕ್ಕಾಗೇ ನಾನು ಕಾದಿದ್ದು..."

"ಗುಜರಾತಲ್ಲಿ! ಅಲ್ಲಿಗೆ ಯಾಕ್ ಹೋದ?"

"ಹೋಗಿದ್ದಲ್ಲ. ಅವ್ನನ್ನ ಒಯ್ದಿದ್ದು!! ಅವ್ನ ಬುದ್ಧಿಭ್ರಮಣೆಗೊಳಿಸಿ, ಅಲ್ಲಿ ಬಿಡಲಾಗಿದೆ... ಯಾವುದೋ ಡ್ರಗ್ ಅನ್ನು ಇಂಜೆಕ್ಟ್ ಮಾಡಿ, ಆತನನ್ನು ಅರೆಹುಚ್ಚನನ್ನಾಗಿ ಮಾಡಿದ್ದಾರೆ! ಕಾರಿನಲ್ಲಿ ಆತನನ್ನು ಸಾಗಿಸಿ, ಗುಜರಾತಲ್ಲಿ ಬಿಟ್ಟುಬಿಟ್ಟಿದ್ದಾರೆ..."

"ಚಿನ್ನಪ್ಪ ಯಾಕೆ ಹಾಗೆ ಮಾಡ್ದ?... ಹಾಂ, ಕರಮಚಂದ, ಕುಟ್ಟಯ್ಯನ ಎಸ್ಟೇಟಿಗೆ ನಾವೀಗ ಎಡಕ್ಕೆ ತಿರುಗಬೇಕಿತ್ತು... ಯಾಕೆ ಬಲಕ್ಕೆ ಹೋಗ್ತಾ ಇದೀವಿ?"